**ಹೆಚ್ಚುವರಿ  ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**

**ಕೆ.ಆರ್.ನಗರ.**

**ಸಿ.ಸಿ ನಂಃ  1518/ 2022**

| | | |
|---|---|---|
| ಸಾಕ್ಷಿಯ ಹೆಸರುಃ | ಜ್ಯೋತಿ | ಫ್ರಾಸಾಃ 3 |
| ಗಂಡನ ಹೆಸರುಃ | ನಾರಾಯಣ | ಚಾಸಾಃ 3 |
| ವಯಸ್ಸುಃ | 53 ವರ್ಷ | ದಿಃ 11-09-2024 |
| ಉದ್ಯೋಗಃ | ಗೃಹಿಣಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಸಾಲಿಗ್ರಾಮ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ಚಾಸಾ 1 ಹಾಗೂ ಚಾಸಾ 2 ಮತ್ತು 4 ರಿಂದ 6 ರವರ ಪರಿಚಯವಿದೆ ಹಾಗೂ ಅವರು ನನ್ನ ಸಂಬಂಧಿಕರಾಗಿರುತ್ತಾರೆ. ಚಾಸಾ 1 ನನ್ನ ಬಾವನ ಮಗಳು. ದಿಃ 18.04.2022 ರಂದು ಮದ್ಯಾಹ್ನ 1.30 ಗಂಟೆ ಸಮಯದಲ್ಲಿ ಸಾಲಿಗ್ರಾಮದಲ್ಲಿರುವ ನಮ್ಮ ಜಮೀನಿನಲ್ಲಿ ಬೆಳೆದಿದ್ದ ಜೋಳವನ್ನು ಏಕೆ ನಾಶ ಮಾಡಿರುತ್ತೀರಿ ಎಂದು 1 ನೇ ಆರೋಪಿಯಲ್ಲಿ ಕೇಳಲು ಹೋದಾಗ ಅಲ್ಲಿ ಎಲ್ಲ ಆರೋಪಿತರು ಇದ್ದರು. ಯಾಕೆ ನಾವು ಬೆಳೆದ ಜೋಳವನ್ನು ನಾಶ ಮಾಡಿರುತ್ತೀರಿ ಎಂದು 1 ನೇ ಆರೋಪಿಯಲ್ಲಿ ಕೇಳಿದಾಗ ಆರೋಪಿತರೆಲ್ಲರೂ ಸೇರಿ ನಮ್ಮೊಂದಿಗೆ ಜಗಳ ತೆಗೆದಿರುತ್ತಾರೆ. 1 ನೇ ಆರೋಪಿಯು ಚಾಸಾ 1 ರವರ ಬೆನ್ನಿಗೆ ಹೊಡೆದಿದ್ದು ಅದರ ಏಟಿಗೆ ಚಾಸಾ 1 ರವರು ನೆಲಕ್ಕೆ ಬಿದ್ದಿರುತ್ತಾರೆ. ಅದರ ಪರಿಣಾಮ ಚಾಸಾ 1 ರವರ ಸೊಂಟಕ್ಕೆ ಪೆಟ್ಟಾಗಿರುತ್ತದೆ. 2 ನೇ ಆರೋಪಿಯು ಮು.ಮಾ 1 ರಿಂದ ಚಾಸಾ 1 ರವರಿಗೆ ಹೊಡೆಯಲು ಬಂದಿರುತ್ತಾರೆ. ಚಾಸಾ 1 ರವರು ಪ್ರೇಮ ವಿವಾಹವಾಗಿರುತ್ತಾರೆ. 1 ನೇ ಆರೋಪಿಯು ಚಾಸಾ 1 ರವರನ್ನು ಉದ್ದೇಶಿಸಿ ಓಡಿ ಹೋದ ಸೂಳೆ ಮುಂಡೆಗೆ ಯಾಕೆ ಜಮೀನು ಕೊಡಬೇಕು ಎಂದು 1 ನೇ ಆರೋಪಿಯು ಅವಾಚ್ಯ ಶಬ್ದದಿಂದ ಬೈದಿರುತ್ತಾರೆ. ನಂತರ ನಾವು ಪೋಲಿಸ್ ಠಾಣೆಗೆ ದೂರನ್ನು ನೀಡಲು ಹೋಗಿದ್ದು, ಚಾಸಾ 1 ರವರಿಗೆ ಏಟಾಗಿದ್ದ ಕಾರಣ ಅವರಿಗೆ ಚಿಕಿತ್ಸೆ ಕೊಡಿಸಿ ಬರುವಂತೆ ಪೋಲಿಸರು ನಮಗೆ ಹೇಳಿರುತ್ತಾರೆ. ನಂತರ ಸಾಲಿಗ್ರಾಮದ ಸರಕಾರಿ ಆಸ್ಪತ್ರೆಯಲ್ಲಿ ಚಾಸಾ 1 ರವರಿಗೆ ಚಿಕಿತ್ಸೆಯನ್ನು ಕೊಟ್ಟು

ದೂರನ್ನು ನೀಡಿರುತ್ತೇವೆ. ಸಾಕ್ಷಿಯು ನ್ಯಾಯಾಲದಯಲ್ಲಿರುವ ಮು.ಮಾ 1 ನ್ನು ನೋಡಿ ಸದರಿ ಮುದ್ದೆ ಮಾಲಿನಿಂದ 2 ನೇ ಆರೋಪಿ ಚಾಸಾ 1 ರವರಿಗೆ ಹಲ್ಲೆ ಮಾಡಲು ಬಂದಿದ್ದರು ಎಂದು ನೋಡಿ ಗುರುತಿಸಿರುತ್ತಾರೆ.

( **ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು – ಅನುಮತಿ ನೀಡಲಾಯಿತು**)

<u>ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ</u>

1. ಜಮೀನಿನ ವಿಚಾರವಾಗಿ ನಮ್ಮ ಸಹಿಗಳನ್ನು ಹಾಕದಿದ್ದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಎಲ್ಲ ಆರೋಪಿತರು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಎಲ್ಲ ಆರೋಪಿತರು ಚಾಸಾ 1 ರವರನ್ನು ಎಳೆದಾಡಿ ಅವರ ದೇಹವನ್ನು ಎಲ್ಲಿ ಬೇಕು ಅಲ್ಲಿ ಮುಟ್ಟಿ ಕೈಯಿಂದ ಅವರ ಬೆನ್ನಿಗೆ ಹೊಡೆದು ಸಾರ್ವಜನಿಕವಾಗಿ ಅವಮಾನ ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರೆಲ್ಲರೂ ಚಾಸಾ 1 ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ**

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು., ಕೆ.ಆರ್.ನಗರ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ.**
**ಸಿ.ಸಿ ನಂಃ 1518/ 2022**

| | | |
|---|---|---|
| ಸಾಕ್ಷಿಯ ಹೆಸರುಃ | ಮಂಜುಳಾ | ಪ್ರಾಸಾಃ 2 |
| ಗಂಡನ ಹೆಸರುಃ | ಲಕ್ಷ್ಮಣೇಗೌಡ | ಚಾಸಾಃ 2 |
| ವಯಸ್ಸುಃ | 58 ವರ್ಷ | ದಿಃ 11-09-2024 |
| ಉದ್ಯೋಗಃ | ಗೃಹಿಣಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಸಾಲಿಗ್ರಾಮ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ಚಾಸಾ 1 ಹಾಗೂ ಚಾಸಾ 3 ರಿಂದ 5 ರವರ ಪರಿಚಯವಿದೆ ಹಾಗೂ ಅವರು ನನ್ನ ಸಂಬಂಧಿಕರಾಗಿರುತ್ತಾರೆ. ನನ್ನ ಓರಗಿತ್ತಿಯಾದ ಪ್ರೇಮ ಮತ್ತು ಭಾವನಾದ ಶಿವರಾಮೇಗೌಡರು ನಮಗೆ ಆಸ್ತಿಯನ್ನು ಕೊಟ್ಟಿರುವುದಿಲ್ಲ. ಸಾಲಿಗ್ರಾಮದಲ್ಲಿರುವ 1 ಎಕರೆ 25 ಗುಂಟೆ ಜಮೀನಿನಲ್ಲಿ ನಾವು ಜೋಳವನ್ನು ಬಿತ್ತಿದ್ದೇವು. ಸದರಿ ಜೋಳದ ಬೆಳೆಯನ್ನು ಶಿವರಾಮೇಗೌಡ ಮತ್ತು ಪ್ರೇಮರವರು ನಾಶ ಮಾಡಿರುತ್ತಾರೆ. ನಾವು ಬೆಳೆದಿದ್ದ ಜೋಳವನ್ನು ಏಕೆ ನಾಶಮಾಡಿರುತ್ತೀರಿ ಎಂದು ಅವರಲ್ಲಿ ಕೇಳಲು ಜಮೀನಿನ ಬಳಿ ಹೋದಾಗ ಶಿವರಾಮೇಗೌಡರ ಅಳಿಯನಾದ 1ನೇ ಆರೋಪಿ ಚಾಸಾ 1 ರವರನ್ನು ಹಿಡಿದು ಎಳೆದಾಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾ 1 ನ್ನು ಸಾಕ್ಷಿಯು ಅದರಿಂದ 2 ನೇ ಆರೋಪಿಯು ಚಾಸಾ 1 ರವರಿಗೆ ಹೊಡೆಯಲು ಮುಂದಾಗಿರುತ್ತಾರೆ. 1 ಮತ್ತು 2 ನೇ ಆರೋಪಿತರು ಹಲ್ಲೆ ಮಾಡಿದ ಪರಿಣಾಮ ಚಾಸಾ 1 ರವರ ಸೊಂಟದಲ್ಲಿ ಗಾಯವಾಗಿರುತ್ತದೆ. ನಂತರ ಚಾಸಾ 1 ರವರನ್ನು ನಾವು ಸಾಲಿಗ್ರಾಮದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇವೆ.

**( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು – ಅನುಮತಿ ನೀಡಲಾಯಿತು)**

ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ

1 ಮತ್ತು 2 ನೇ ಆರೋಪಿತರು ಚಾಸಾ 1 ರವರನ್ನು ಎಳೆದಾಡಿ ಅವರ ದೇಹವನ್ನು ಎಲ್ಲಿ ಬೇಕು ಅಲ್ಲಿ ಮುಟ್ಟಿ ಕೈಯಿಂದ ಅವರ ಬೆನ್ನಿಗೆ ಹೊಡೆದು ಸಾರ್ವಜನಿಕವಾಗಿ ಅವಮಾನ ಮಾಡಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಯು ಚಾಸಾ 1 ರವರಿಗೆ ಬೋಳಿ ಮುಂಡೆ ಮತ್ತು ಸೂಳೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಜಮೀನಿನ ವಿಚಾರವಾಗಿ ನಮ್ಮ ಸಹಿಗಳನ್ನು ಹಾಕದಿದ್ದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು 1 ನೇ ಆರೋಪಿಯು ಹೇಳಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಯು ಚಾಸಾ 1 ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈಗಲೂ ಸಹ 1 ನೇ ಆರೋಪಿ ನಮ್ಮೊಂದಿಗೆ ಜಗಳ ಮಾಡುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

**ಪಾಟೀ ಸವಾಲುಃ**

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು., ಕೆ.ಆರ್.ನಗರ**